ಅವರ್ಣನೀಯ ಮಾಂತ್ರಿಕತೆ ಇತ್ತು. ಮೈತುಂಬಾ ಚಿನ್ನದ ಬಣ್ಣವನ್ನು ಹೊತ್ತು ನಿಂತಿದ್ದ ಅವನಿಂದಾಗಿ, ಕಡಲಿಗೆ ಹಂಬಲಿಸುವ ನನಗೆ ಮೊಟ್ಟಮೊದಲ ಬಾರಿಗೆ ಪರ್ವತವೂ ಸುಂದರ ಅನ್ನಿಸಿತ್ತು. ಎಷ್ಟೋ ಸುಂದರ ದೃಶ್ಯಗಳು, ನಾಟಕಗಳು, ಸಿನಿಮಾಗಳು ಸಹ ಆಗ ನಾವು ಯಾರ ಜೊತೆಯಲ್ಲಿ ಇರುತ್ತೇವೆ ಎನ್ನುವುದರ ಮೇಲೆ ಅದ್ಭುತ ಅಥವಾ ಮಿಡಿಯೋಕರ್ ಆಗಿಬಿಡುತ್ತವೆ. ಅದೇ ಮಾಯಕದ ಗಳಿಗೆಯಲ್ಲಿ, 'ಇನ್ನೊಂದು ದಿನ ನಾನಿಲ್ಲಿ ಇರುತ್ತೇನೆ, ನನ್ನ ನಿನ್ನ ಜೀವನದಿಂದ ಈ ಒಂದು ದಿನದ ಕೊಂಡಿಯನ್ನು ಕಳಚಿ, ನನ್ನ ಬಗ್ಗೆ ನೀನು, ನಿನ್ನ ಬಗ್ಗೆ ನಾನು ಏನನ್ನೂ ಕೇಳದೆ ಈ ದಿನವನ್ನು ಕಳೆದುಬಿಡೋಣವೆ?' ಎಂದು ಆಮೇಲೆ ನನಗೇ ಅಚ್ಚರಿಯಾಗುವಂತೆ ಕೇಳಿಬಿಟ್ಟೆ. ನನ್ನ ಹೆಸರನ್ನೂ ಕೇಳದ ಅವ ತಲೆ ಆಡಿಸಿ, 'ನಿಲಾ...' ಎಂದ, ಅವನ ಭಾಷೆಯಲ್ಲಿ ನಿಲಾ ಎಂದರೆ ಚಂದ್ರ. ಹೀಗೆ ಒಬ್ಬರಿಗೊಬ್ಬರು ಹೆಸರನ್ನು ಕೊಟ್ಟುಕೊಂಡಿದ್ದೆವು. ಹೆಸರಿನ ಜೊತೆಗೆ ಒಬ್ಬರನ್ನೊಬ್ಬರಿಗೆ ಕೊಟ್ಟುಬಿಟ್ಟಿದ್ದೆವು. ಸಾಮಾಜಿಕ, ಸಾಂಪ್ರದಾಯಿಕ ಸಂಬಂಧಗಳು ಹುಟ್ಟುಹಾಕುವ ಯಾವುದೇ ಹೊರೆಯ ಇರುವಿಕೆಯನ್ನು, ಬರುವಿಕೆಯನ್ನು ನಿರಾಕರಿಸಿದ ಒಂದು ಸಂಬಂಧಕ್ಕೆ ಆ ಮಟ್ಟದ ಮೋಹಕತೆ ಬರುವುದೆ? ಕ್ಷಣಭಂಗುರವಾದದ್ದೆಲ್ಲಾ ಹೀಗೆ ನಾಗರಹಾವಿನ ಹೆಡೆಯಂತೆ, ಹುಲಿಯ ಮೈಮೇಲಿನ ಚಿತ್ತಾರದ ವಿನ್ಯಾಸದಂತೆ, ಒಳಗೆ ಬಾ ಎಂದು ಮೊರೆದು ಕರೆಯುವ ಕಡಲಿನಂತೆ, ಕಿಂದುರಿ ನುಡಿಸುವವನ ಕಾಣದ ಅರಮನೆಯಂತೆ ಆಕರ್ಷಕವಾಗಬಲ್ಲುದೆ? 'ನಾನು ಕರೆವೆ, ನೀನು ಸುರಿವೆ, ನೀನು ಮೊರೆವೆ ನಾನು ತಣಿವೆ...' ಇಷ್ಟಕ್ಕೂ ಕೊಟ್ಟದ್ಯಾರು, ಪಡೆದದ್ಯಾರು? ಸೆಳೆದದ್ದು ಸಂಗೀತವೇ ಹೌದಾದರೂ ನನ್ನನ್ನು ಕಟ್ಟಿಹಾಕಿದ್ದು ಮಾತ್ರ ಅವನ ಸ್ವಭಾವ. ಅವನೊಳಗಣ ಭಾವುಕತೆಯನ್ನು ಅವನ ಕಣ್ಣುಗಳು ಹೇಳುತ್ತಿದ್ದವೇ ಹೊರತು, ನಾಲಿಗೆಯಲ್ಲ. ಕೋಲಾಹಲವನ್ನೇ ಎಬ್ಬಿಸುವ ಅವನ ಬೆರಳುಗಳು ಆಡಿದಷ್ಟು ಪ್ರೀತಿಯ ಮಾತುಗಳನ್ನು ಅವನ ನಾಲಿಗೆ ಎಂದೂ ಆಡಿಲ್ಲ, ಅವನೊಳಗಣ ಜಗತ್ತಿಗೊಂದು ದಾರಿ ಹುಡುಕುವುದು ನನ್ನ ಪಾಲಿನ ನಿರಂತರ ಸವಾಲು. ಪ್ರೇಮ ಎಂದರೆ ಒಂದು ಹೆಜ್ಜೆ ಹಿಂದಿಡುವ ನಾನು ಅನೇಕರಿಗೆ ನಿರ್ಭಾವುಕವಾಗಿ ಕಾಣುತ್ತೇನೆ. ಆದರೆ, ನನ್ನ ಸಮಸ್ಯೆ ಭಾವರಾಹಿತ್ಯವಲ್ಲ, ಅತಿ ಭಾವುಕತೆ. ಹಚ್ಚಿಕೊಂಡೆನೆಂದರೆ ಪೂರ್ಣ ನಂಬಿಕೆ. ಆದರೆ, ಅದನ್ನು ಕಳೆದುಕೊಂಡಾಗೆಲ್ಲಾ ಅದರ ಜೊತೆಗೆ ಸ್ವಲ್ಪ ನನ್ನನ್ನೂ ಕಳೆದುಕೊಂಡಿದ್ದೇನೆ. ಅದಕ್ಕೇ ಹಚ್ಚಿಕೊಳ್ಳಲು ಹಿಂಜರಿಯುತ್ತೇನೆ. ಯಾರಾದರೂ ಅತಿಯಾಗಿ ಅಥವಾ ಅತಿಬೇಗ ಹತ್ತಿರಾಗಲು ಪ್ರಯತ್ನಿಸಿದರೆ ಬೇಕೆಂದೇ ಒರಟಾಗಿ ನುಡಿಯಾಡುತ್ತೇನೆ. ಆದರೆ, ಹತ್ತಿರಾಗಿಯೂ ಉಸಿರುಕಟ್ಟಿಸದಿರುವ ಕಲೆ ಅವನಿಗೆ ಗೊತ್ತಿತ್ತು. ಹಾಗಾಗಿಯೇ ಅವನೆದುರಲ್ಲಿ ನಾನು ನನ್ನ ಕವಚವನ್ನು ಕಳಚಿಡಬಹುದಿತ್ತು. ಉದಯಪುರದಿಂದ ನನ್ನ ಫ್ಲೈಟ್, ಡ್ರಾಪ್ ಮಾಡಲು ಅವನೇ ಬಂದ. ದಾರಿಯುದ್ದಕ್ಕೂ ಮೌನ, ಒಮ್ಮೆ ಮಾತ್ರ ಮೆಲುದನಿಯಲ್ಲಿ ಕೇಳಿದ, 'ನಿಲಾ... ಫೋನ್ ನಂಬರ್?' ನಾನು ತಲೆಯಾಡಿಸಿದೆ. ಏರ್‌ಪೋರ್ಟ್‌ನಲ್ಲಿ ಗಾಡಿ ನಿಲ್ಲಿಸಿದ. ಎಂಜಿನ್ ಆಫ್ ಮಾಡಿದವನು ಬಿಸಿಲು ಸುರಿಯುತ್ತಿದ್ದ ಎದುರಿನ ಖಾಲಿ ಖಾಲಿ ಉದ್ದದ ರಸ್ತೆಯನ್ನು ನಿಟ್ಟಿಸುತ್ತಾ ಮೌನವಾಗಿ ಕುಳಿತುಬಿಟ್ಟ. ಗಾಡಿ ಇಳಿಯಬೇಕು ಎಂದೂ ತೋಚದೆ ನಾನೂ ಕುಳಿತಿದ್ದೆ. ಎಷ್ಟೋ ಹೊತ್ತಿನ ನಂತರ ಇಳಿದು, ಹಿಂದಿನ

